ದಿನಾಂಕಃ 15-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಸಿ.ಎ.ಎಸ್. ಪ್ರತಿವಾದಿ ಪರ ವಕೀಲರಿಂದಃ

ನನ್ನ ತಾತನ ಹೆಸರು ನನಗೆ ಗೊತ್ತಿಲ್ಲ. ವೆಂಕಟಪ್ಪ ಯಾರು ಎಂದರೆ ನನ್ನ ತಂದೆ. ಅವರು ತೀರಿಕೊಂಡು 40 ವರ್ಷಗಳು ಆಗಿರುತ್ತದೆ. ವೆಂಕಟಪ್ಪ ರವರಿಗೆ ಎಷ್ಟು ಜನ ಅಣ್ಣತಮ್ಮಂದಿರು ಎಂದರೆ ನನ್ನ ತಂದೆಯನ್ನು ಬಿಟ್ಟು ನಾರಾಯಣಪ್ಪ (ಅಣ್ಣ). ನಾರಾಯಣಪ್ಪನಿಗೆ 3 ಜನ ಮಕ್ಕಳು. ಅವರ ಹೆಸರುಗಳು ನಾರಾಯಣಪ್ಪ, ನಾಗರಾಜಪ್ಪ, ವೆಂಕಟೇಶಪ್ಪ. ನಾರಾಯಣಪ್ಪ, ನಾಗರಾಜಪ್ಪ, ವೆಂಕಟೇಶಪ್ಪ ಪುಟ್ಟಾಪುರ್ಲ್ಲಹಳ್ಳಿ ಇರುತ್ತಾರೆ. ನನ್ನ ತಂದೆ ಹಾಗೂ ನಾರಾಯಣಪ್ಪ ನಾನು ಹುಟ್ಟುವ ಮುಂಚೆನೇ ಬೇರೆಯಾಗಿದ್ದರು. ಆಸ್ತಿಯು ನಾನು ಹುಟ್ಟುವ ಮುಂಚೆನೇ ಭಾಗವಾಗಿತ್ತು, ಯಾರಿಗೆ ಎಷ್ಟು ಆಸ್ತಿ ಬಂತು ಎಂದರೆ ಗೊತ್ತಿಲ್ಲ. ತಿಮ್ಮಯ್ಯ ಯಾವ ಊರು ಎಂದರೆ ಪುಟ್ಟಾಪುರ್ಲ್ಲಹಳ್ಳಿ . ಟಿ. ನಾಗರಾಜು ಯಾರು ಎಂದರೆ ನನ್ನ ಅಣ್ಣ. ಪ್ರತಿವಾದಿ ತಂದೆಗೆ ಟಿ.ನಾಗರಾಜ್ ರವರು ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ಪ್ರತಿವಾದಿ ತಕರಾರು ಬಗ್ಗೆ ಮಾಹಿತಿ ಇದೆಯಾ ಎಂದರೆ ಜಮೀನು ನನ್ನದ್ದು ಎಂದು ಹೇಳಿ ಹಾಕಿರುತ್ತಾರೆ. ವಹಿವಾಟುಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಗೊತ್ತಿಲ್ಲ. ವಿಭಾಗ ಪತ್ರದ ಬಗ್ಗೆ ನಾಗರಾಜ್ ರವರನ್ನು ವಿಚಾರಿಸಿದ್ದೀರಾ ಎಂದರೆ ಇಲ್ಲ. ದಾವಾಸ್ವತ್ತು ಪೋಡಿಯಾಗಿದೆಯಾ ಎಂದರೆ ಆಗಿರುತ್ತದೆ. ಎಷ್ಟು ಪೋಡಿಗಳು ಆಗಿವೆ ಎಂದರೆ ಗೊತ್ತಿಲ್ಲ. ಒಟ್ಟು ದಾವಾಸ್ತಿ ಎಷ್ಟು ಎಂದರೆ ಗೊತ್ತಿಲ್ಲ. ದಾವಾಸ್ತಿಯ ಬಗ್ಗೆ ನನ್ನ ತಾಯಿಗೆ ಗೊತ್ತಾ ಎಂದರೆ ಗೊತ್ತಿರುತ್ತದೆ. ಸ.ನಂ. 254/1 ಯಾರದ್ದು ಎಂದರೆ ನಮ್ಮದ್ದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವೆರೆದು ಯಾರದ್ದು ಎಂದು ಗೊತ್ತಿಲ್ಲವೆಂದು ನುಡಿಯುತ್ತಾರೆ. ಸ.ನಂ. 254/1 ಯಾರ ಹೆಸರಿನಲ್ಲಿ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಪ್ರತಿವಾದಿಯವರು ಪಾಯವನ್ನು 31 ವರ್ಷಗಳ ಹಿಂದೆಯೇ ಹಾಕಿರುತ್ತಾರೆ.

ಅ.ದಾ. ಸಂಃ 04/2023 ಪಿ.ಡಬ್ಲ್ಯು: 01

ನನ್ನ ತಾಯಿಯಾಗಲೀ, ನಾನಾಗಲೀ ಕಾನೂನು ಕ್ರಮ ತೆಗೆದುಕೊಂಡಿಲ್ಲವೆಂದರೆ ನನ್ನ ತಾಯಿ ತೀರಿಕೊಂಡು 45 ವರ್ಷಗಳು ಆಗಿರುತ್ತದೆ. ನಿವೇನಾದರು ಕ್ರಮ ತೆಗೆದುಕೊಂಡಿದ್ದೀರಾ ಎಂದರೆ ನಾವು ಹೋಗಿ ನೋಡುವಷ್ಟರಲ್ಲಿ ಪಾಯವನ್ನು ಹಾಕಿದ್ದರು. ಪ್ರತಿವಾದಿಯವರು ಜಮೀನಿನ ವಿಚಾರವಾಗಿ ಪ್ರಶ್ನೆ ಮಾಡಿದ್ದೀರಾ ಎಂದರೆ ಇಲ್ಲ.

**(**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು